ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಿದ ದಿನಾಂಕ**: 14.12.2023.**

**ಪಾಟೀ ಸವಾಲು - ವಾದಿಗಳ ಪರ ವಕೀಲರಿಂದಃ**

4) ನಾನು ಪಿ.ಯು.ಸಿ. ಅನುತ್ತೀರ್ಣನಾಗಿರುತ್ತೇನೆ. ನನಗೆ ಕನ್ನಡದಲ್ಲಿ ಇರುವುದನ್ನು ಮಾತ್ರ ಓದಲು ಬರೆಯಲು ಬರುತ್ತದೆ, ಇಂಗ್ಲೀಷ ಬರುವುದಿಲ್ಲ. 1 ನೇ ವಾದಿಯ ಗಂಡ ಜೆ.ಎಂ.ಕೃಷ್ಣಪ್ಪ ಮತ್ತು ನನ್ನ ತಂದೆ ದ್ಯಾವಣ್ಣ ಸಂಬಂಧಿಕರು ಎಂದರೆ ಅವರ ನಡುವೆ ಯಾವುದೇ ಸಂಬಂಧ ಇರುವುದಿಲ್ಲ. ಜೆ.ಎಂ.ಕೃಷ್ಣಪ್ಪನವರ ತಂಗಿ ಪುಟ್ಟಮ್ಮನನ್ನೇ ನನ್ನ ಚಿಕ್ಕಪ್ಪನಿಗೆ ಮದುವೆ ಮಾಡಿಕೊಳ್ಳಲಾಗಿದೆ ಎಂದರೆ ಅದರ ಬಗ್ಗೆ ನನಗೆ ಸರಿಯಾಗಿ ಗೊತ್ತಿಲ್ಲ. ನನ್ನ ಚಿಕ್ಕಪ್ಪ ಸದರಿ ಪುಟ್ಟಮ್ಮನನ್ನು ಮದುವೆಯಾಗಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5) ಬೈಯ್ಯಪ್ಪನಹಳ್ಳಿ ಜೋಡಿ ಗ್ರಾಮವೆಂದರೆ ಆ ರೀತಿ ಹೇಳುತ್ತಾರೆ, ನನಗೆ ಖುದ್ದಾಗಿ ಗೊತ್ತಿಲ್ಲ. ಸಾಕ್ಷಿಗೆ ದಾವಾ ಸ್ವತ್ತು ಬೈಯ್ಯಪ್ಪನಹಳ್ಳಿ ಗ್ರಾಮದಲ್ಲಿ ಇದೆ ಎಂದು ಸೂಚಿಸಿದರೆ ಸಾಕ್ಷಿಯು ಆ ರೀತಿ ಹೇಳುತ್ತಾರೆ, ನನಗೆ ಸರಿಯಾಗಿ ಗೊತ್ತಿಲ್ಲವೆಂದು ಹೇಳಿದ್ದು, ನಿಪಿ-3 ರಲ್ಲಿ ಸರ್ವೆ ನಂ.68 ಮತ್ತು 71 ಇವು ಬೈಯ್ಯಪ್ಪನಹಳ್ಳಿ ಎಂದು ನಮೂದಾಗಿರುವುದನ್ನು ನ್ಯಾಯಾಲಯವು ಗಮನಿಸಿರುತ್ತದೆ. ದಾವಾ ಸ್ವತ್ತುಗಳ ಪಹಣಿಗಳಲ್ಲಿ ಕೂಡ ಈ ಎರಡೂ ಆಸ್ತಿಗಳು ಬೈಯ್ಯಪ್ಪನಹಳ್ಳಿಯಲ್ಲಿ ಇವೆ ಎಂದು ನಮೂದಾಗಿವೆ ಎಂದರೆ ಸರಿ. ಸಿ.ಕೃಷ್ಣಾರಾವ್ ಎನ್ನುವವರು ಜೋಡಿದಾರ್ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಗಳು ಈ ದಾವೆಯಲ್ಲಿ ಯಾವ ಯಾವ ದಾಖಲೆಗಳನ್ನು ಹಾಜರು ಮಾಡಿದ್ದಾರೆಂದು ನಾನು ನೋಡಿದ್ದುಂಟೇ? ಎಂದರೆ ನೋಡಿದ್ದೇನೆ. 1 ನೇ ವಾದಿಯ ಗಂಡ ಮತ್ತು ಉಳಿದ ವಾದಿಗಳ ತಂದೆ ಜೆ.ಎಂ. ಕೃಷ್ಣಪ್ಪ ಮತ್ತು ನನ್ನ ತಂದೆ ದ್ಯಾವಣ್ಣ ಜಂಟಿಯಾಗಿ ದಿನಾಂಕಃ 24.12.1957 ರಂದು ಸದರಿ ಸಿ.ಕೃಷ್ಣಾರಾವ್ ರವರಿಂದ ದಾವಾ ಸ್ವತ್ತುಗಳನ್ನು ಖರೀದಿ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ಕ್ರಯಪತ್ರವು ಅದೇ ಕ್ರಯಪತ್ರವಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಹಳೆಗನ್ನಡ ಮತ್ತು ಇಂಗ್ಲೀಷ ಗೊತ್ತಾಗುವುದಿಲ್ಲ ಎಂದಿದ್ದಾರೆ. ಜೆ.ಎಂ.ಕೃಷ್ಣಪ್ಪ ಮತ್ತು ನನ್ನ ತಂದೆ

ಇಬ್ಬರೂ ಜಂಟಿಯಾಗಿ ದಿನಾಂಕಃ 24.12.1957 ರಂದು ಸಿ.ಕೃಷ್ಣಾರಾವ್ ರವರ ಕಡೆಯಿಂದ ದಾವಾ ಸ್ವತ್ತನ್ನು ಖರೀದಿ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1956 ರಲ್ಲಿ Inams Abolition Act ಜಾರಿಗೆ ಬಂದ ನಂತರ ಈ ದಾವಾ ಸ್ವತ್ತುಗಳು ಸರ್ಕಾರದಲ್ಲಿ ನಿಹಿತವಾಗಿದ್ದವು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಅದಾದ ನಂತರ ನನ್ನ ತಂದೆ ಮತ್ತು ಜೆ.ಎಂ.ಕೃಷ್ಣಪ್ಪನವರು ದಾವಾ ಸ್ವತ್ತನ್ನು ಅವರಿಗೆ ಮರು-ಮಂಜೂರಾತಿ ಮಾಡುವಂತೆ ದಿನಾಂಕಃ 31.07.1959 ರಂದು ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ದ್ಯಾವಣ್ಣನ ತಂದೆಯ ಹೆಸರು ಅಂಜಿನಪ್ಪ ಎಂದರೆ ನನ್ನ ತಾತನಿಗೆ ಹನುಮಂತಪ್ಪ ಮತ್ತು ಅಂಜಿನಪ್ಪ ಎಂಬ ಎರಡು ಹೆಸರುಗಳು ಇದ್ದವು. ಆ ರೀತಿ ನನ್ನ ತಂದೆ ಮತ್ತು ಜೆ.ಎಂ.ಕೃಷ್ಣಪ್ಪನವರು ದಾವಾ ಸ್ವತ್ತನ್ನು ಅವರಿಗೆ ಮರು-ಮಂಜೂರಾತಿ ಮಾಡುವಂತೆ ಕೋರಿ ಅರ್ಜಿ ಸಲ್ಲಿಸಿರುವುದು ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ತೋರಿಸಿದ ಮರು-ಮಂಜೂರಾತಿ ಕೋರಿ ಸಲ್ಲಿಸಿದ ಜಂಟಿ ಅರ್ಜಿಯನ್ನು ನೋಡಿದೆ, ಇದರಲ್ಲಿ ನನ್ನ ತಂದೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಜಂಟಿ ಅರ್ಜಿ ಮೇರೆಗೆ ಇನಾಂ ಡಿ.ಸಿ. ಯವರು ದಿನಾಂಕಃ 09.03.1962 ರಂದು ನನ್ನ ತಂದೆ ಮತ್ತು ಜೆ.ಎಂ.ಕೃಷ್ಣಪ್ಪನವರ ಹೆಸರಿಗೆ ಮರು-ಮಂಜೂರಾತಿ ಆದೇಶ ಮಾಡಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಆದೇಶದ ಪ್ರತಿಯನ್ನು ತೋರಿಸಿ ಇದರಲ್ಲಿ ದಾವಾ ಸ್ವತ್ತಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣ ಕೂಡ ತೋರಿಸಿದ್ದಾರೆ, ಕಾಣುತ್ತಿದೆಯೇ? ಎಂದರೆ ಕಾಣುತ್ತಿದೆ ಎಂದಿದ್ದರಿಂದ **ಅದನ್ನು ನಿಪಿ-40 ಎಂದು ಗುರುತಿಸಿತು.** ನನಗೆ ಸದರಿ ಮಂಜೂರಾತಿಯಾದ ಬಗ್ಗೆ ಹಿಂಬರಹ ನೀಡಿರುವ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದರಿ ಹಿಂಬರಹವನ್ನು ತೋರಿಸಿ ಇದರಲ್ಲಿ ಸರ್ವೆ ನಂಬರ್ 68, 71 ಮತ್ತು ನಿಮ್ಮ ತಂದೆಯ ಹೆಸರು ದ್ಯಾವಣ್ಣ ಎಂದು ಇದೆಯಲ್ಲವೇ? ಎಂದು ಕೇಳಿದ್ದು, ಸಾಕ್ಷಿಯು ಇದೆ ಎಂದು ಹೇಳಿದ್ದರಿಂದ **ಅದನ್ನು ನಿಪಿ-41 ಎಂದು ಗುರುತಿಸಿತು.** ನನ್ನ ತಂದೆ ಮರು-ಮಂಜೂರಾತಿ ಕೋರಿ ಇನಾಂ ಡಿ.ಸಿ.ಯವರ ಮುಂದೆ ಹೇಳಿಕೆ

ಕೊಟ್ಟಿದ್ದರು ಎಂದರೆ ನನಗೆ ಅದರ ಬಗ್ಗೆ ಗೊತ್ತಿಲ್ಲ. ಸದರಿ ಹೇಳಿಕೆಯಲ್ಲಿ ನನ್ನ ತಂದೆಯು ಜೆ.ಎಂ.ಕೃಷ್ಣಪ್ಪನನ್ನು ಬಾವ ಮೈದುನನೆಂದು ಕೂಡ ಹೇಳಿದ್ದಾರೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಮಂಜೂರಾತಿ ಬಗ್ಗೆ ಮತ್ತು ನನ್ನ ತಂದೆ ಕೊಟ್ಟ ಹೇಳಿಕೆಯ ಬಗ್ಗೆ ತಿಳಿದುಕೊಳ್ಳಲು ನನಗೆ ತೊಂದರೆ ಇರಲಿಲ್ಲ ಎಂದರೆ ನಾನು ತಿಳಿದುಕೊಳ್ಳಲು ಪ್ರಯತ್ನ ಮಾಡಲಿಲ್ಲ. ನನ್ನ ತಂದೆ ಮಾಡಿದ ಎಲ್ಲಾ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರು-ಮಂಜೂರಾತಿ ಆದ ನಂತರ ನನ್ನ ತಂದೆ ಮತ್ತು ಜೆ.ಎಂ. ಕೃಷ್ಣಪ್ಪನವರ ಹೆಸರಿಗೆ ಜಂಟಿಯಾಗಿ ನಮೂನೆ-8 ನ್ನು ನಿಪಿ-3 ರಂತೆ ನಮೂದು ಕೂಡ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ರೀತಿ ನಮೂದು ಮಾಡಿದ್ದರೂ ಸಹ ನಾನು ದಾವೆ ವಜಾ ಮಾಡಲಿ ಎಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-3 ರ ಬಗ್ಗೆ ಪ್ರಶ್ನೆ ಕೇಳಿದರೆ ನನಗೆ ಚಿಕ್ಕ ಅಕ್ಷರಗಳು ಕಾಣುವುದಿಲ್ಲ ಎಂದು ಹೇಳಿದ್ದಾರೆ. ಈ ಸಾಕ್ಷಿಯವರು ಉದ್ದೇಶಪೂರಿತವಾಗಿ ಪ್ರಶ್ನೆಗಳಿಗೆ ಸೂಕ್ತವಾದ ಉತ್ತರ ನೀಡದೇ ಸಬೂಬುಗಳನ್ನು ಹೇಳುತ್ತಿರುವಂತೆ ನ್ಯಾಯಾಲಯಕ್ಕೆ ಕಂಡು ಬಂದಿರುತ್ತದೆ. ನಿಪಿ-4 ರಿಂದ ನಿಪಿ-18, ನಿಪಿ-38 ಮತ್ತು ನಿಪಿ-39 ರಂತೆ ನನ್ನ ತಂದೆ ಹಾಗೂ ಜೆ.ಎಂ.ಕೃಷ್ಣಪ್ಪನವರಿಗೆ ದಾವಾ ಸ್ವತ್ತನ್ನು ಜಂಟಿಯಾಗಿ ಅವರ ಹೆಸರುಗಳಿಗೆ ನಮೂದು ಮಾಡಿದ್ದಾರೆ ಎಂದರೆ ನಾನು ಆ ದಾಖಲೆಗಳನ್ನು ನೋಡಿಲ್ಲ. ಸಾಕ್ಷಿಗೆ ನಿಪಿ-4 ರಿಂದ ನಿಪಿ-18, ನಿಪಿ-38 ಮತ್ತು ನಿಪಿ-39 ನ್ನು ಕೈಗೆ ಕೊಟ್ಟು ನೋಡುವಂತೆ ಕೇಳಿದರೆ ಸಾಕ್ಷಿಯವರು ಆ ದಾಖಲೆಗಳನ್ನು ನೋಡಲು ನಿರಾಕರಿಸಿದ್ದಾರೆ. ಈ ದಿನಕ್ಕೂ ದಾವಾ ಸ್ವತ್ತಿನ ಕಂದಾಯ ದಾಖಲೆಗಳಲ್ಲಿ ನನ್ನ ತಂದೆ ಹಾಗೂ ಜೆ.ಎಂ.ಕೃಷ್ಣಪ್ಪನವರ ಹೆಸರುಗಳು ಮುಂದುವರೆಯುತ್ತಿವೆ ಎಂದರೆ ಉತ್ತರ ನೀಡಿಲ್ಲ. ನಿಪಿ-33 ರಂತೆ ನನ್ನ ತಂದೆ ಹಾಗೂ ಜೆ.ಎಂ.ಕೃಷ್ಣಪ್ಪ ಇಬ್ಬರೂ ದಾವಾ ಸ್ವತ್ತಿಗೆ ಜಂಟಿಯಾಗಿ ಕಂದಾಯ ಪಾವತಿ ಮಾಡಿದ್ದಾರೆ ಎಂದರೆ ನನಗೆ ಕಾಣುತ್ತಿಲ್ಲ. ನಿಪಿ-33 ಕನ್ನಡದಲ್ಲಿ ಇದ್ದು, ನನಗೆ ಚೆನ್ನಾಗಿ ಕಾಣುತ್ತಿದ್ದರೂ ಕೂಡ ಕಾಣುತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಜೀವಂತವಿರುವವರೆಗೂ ಅವರು ಮತ್ತು ಜೆ.ಎಂ.ಕೃಷ್ಣಪ್ಪ

ದಾವಾ ಸ್ವತ್ತಿನ ಜಂಟಿ ಮಾಲೀಕರಾಗಿ ಇದ್ದರು ಎಂದರೆ ಸರಿಯಲ್ಲ. ಅವರುಗಳು ದಾವಾ ಸ್ವತ್ತಿನಲ್ಲಿ ಜಂಟಿ ಸ್ವಾಧೀನ ಕೂಡ ಹೊಂದಿದ್ದರು ಎಂದರೆ ಸರಿಯಲ್ಲ, ನಾನು ಹೇಳುತ್ತೇನೆ ಈ ದಾವೆ ಹಾಕಿದ 2 ವರ್ಷಗಳ ನಂತರ ಜಂಟಿ ಖಾತೆ ನಮೂದು ಮಾಡಲಾಗಿದೆ.

6) ನಿಪಿ-4 ರಿಂದ ನಿಪಿ-18, ನಿಪಿ-38 ಮತ್ತು ನಿಪಿ-39 ರಲ್ಲಿ ಜಂಟಿ ಖಾತೆ ನಮೂದಾಗಿರುತ್ತದೆ ಎಂದರೆ 2018 ರ ನಂತರವೇ ಜಂಟಿ ಖಾತೆ ನಮೂದಾಗಿದೆ, ಅದಕ್ಕಿಂತ ಮುಂಚೆ ಆಗಿಲ್ಲ. ಆ ರೀತಿ ನನ್ನ ತಂದೆ ಹೆಸರಿಗೆ ಮಾತ್ರ ಕಂದಾಯ ದಾಖಲೆಗಳು ನಮೂದಾಗಿರುವ ಬಗ್ಗೆ ನಾನು ಯಾವ ದಾಖಲೆಗಳನ್ನು ಹಾಜರು ಮಾಡಿದ್ದೇನೆ ಎಂದರೆ ಕೆ.ಎಸ್.ಅಂಜಿನಪ್ಪನ ಕಡೆಯಿಂದ ನನ್ನ ತಂದೆಗೆ ನೋಂದಣಿಯಾಗಿರುವ ಕ್ರಯಪತ್ರವನ್ನು ಕೊಟ್ಟಿದ್ದೇನೆ. ಆ ಕ್ರಯಪತ್ರವನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳನ್ನು ನಾನು ಕೊಟ್ಟಿಲ್ಲ ಎಂದರೆ ಪಹಣಿ ಕೊಟ್ಟಿದ್ದೇನೆ. ನಾನು ಯಾವ ಇಸವಿಯ ಪಹಣಿಗಳನ್ನು ಕೊಟ್ಟಿದ್ದೇನೆ ಎಂದರೆ ನನಗೆ ಸರಿಯಾಗಿ ಜ್ಞಾಪಕವಿಲ್ಲ. ನನ್ನ ತಂದೆಗೆ ಹಾಗೂ ಜೆ.ಎಂ.ಕೃಷ್ಣಪ್ಪನವರಿಗೆ ಜಂಟಿಯಾಗಿ ಖಾತೆ ನಮೂದಾಗಿದ್ದರೂ ಸಹ ನಾನು ನನ್ನ ತಂದೆಗೆ ಮಾತ್ರ ಖಾತೆ ನಮೂದಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಹಾಗೂ ಜೆ.ಎಂ.ಕೃಷ್ಣಪ್ಪನವರ ಜೀವಿತಾವಧಿಯಲ್ಲಿ ಅವರಿಬ್ಬರ ನಡುವೆ ಯಾವುದೇ ಪಾಲು ವಿಭಾಗ ನಡೆದಿರಲಿಲ್ಲ ಎಂದರೆ ಉತ್ತರಿಸಿಲ್ಲ. ನನ್ನ ತಂದೆ 1991 ರಲ್ಲಿ ಮೃತಪಟ್ಟರು. ಅವರಿಗೆ ಮೂರು ಜನ ಮಕ್ಕಳು ಇದ್ದು, ಅವರಲ್ಲಿ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಮಗಳು ಇರುತ್ತಾರೆ. ನನ್ನ ಅಣ್ಣನ ಹೆಸರು ಗೋಪಾಲಯ್ಯ ಇದ್ದು, ಅವರು ಮೃತಪಟ್ಟಿದ್ದಾರೆ. ನನ್ನ ಅಣ್ಣನಿಗೆ ಹೆಂಡತಿ ಮತ್ತು ಒಬ್ಬ ಮಗಳು ಇರುತ್ತಾರೆ. ಹೆಂಡತಿ ಹೆಸರು ರತ್ನಮ್ಮ ಮತ್ತು ಮಗಳ ಹೆಸರು ಅಂಜನಾ ಇದ್ದು, ಅವರು ಅಮೆರಿಕಾದಲ್ಲಿ ವಾಸ ಮಾಡುತ್ತಾರೆ. ನನ್ನ ಅಕ್ಕನ ಹೆಸರು ಬೈರಮ್ಮ. ನನ್ನ ತಂದೆಯ ಕುಟುಂಬಕ್ಕೆ ನಾನೇ ಯಜಮಾನ ಎಂದರೆ ಎಲ್ಲವನ್ನೂ ನನಗೇ ವಹಿಸಿದ್ದಾರೆ. ಈ ದಾವಾ ಸ್ವತ್ತುಗಳಲ್ಲಿ ನನ್ನ ತಂದೆಯ

ಹಿಸ್ಸೆ ನನಗೇ ಬರುತ್ತದೆ ಎಂದರೆ ನನ್ನ ತಂದೆಗೆ ಏನು ಆಸ್ತಿ ಇದೆಯೋ ಅದೆಲ್ಲಾ ನನ್ನದೇ ಇರುತ್ತದೆ. ನನ್ನ ತಂದೆಯ ಮರಣಾನಂತರ ನಾನು ಮತ್ತು ಜೆ.ಎಂ.ಕೃಷ್ಣಪ್ಪ ಜಂಟಿಯಾಗಿ ಸ್ವಾಧೀನ ಹೊಂದಿ ಮಾಲೀಕತ್ವ ಅನುಭವಿಸುತ್ತಿದ್ದೆವು ಎಂದರೆ ಸರಿಯಲ್ಲ. ನನ್ನ ತಂದೆಯ ಮರಣಾನಂತರ ನಾನು ಮತ್ತು ಜೆ.ಎಂ.ಕೃಷ್ಣಪ್ಪ ಬೇರೆ ಬೇರೆಯಾಗಿ ಸ್ವಾಧೀನ ಹೊಂದಿದ್ದೇವೆ ಎಂಬ ಬಗ್ಗೆ ನಾನು ಯಾವುದಾದರೂ ದಾಖಲೆಗಳನ್ನು ಹಾಜರು ಮಾಡಿದ್ದುಂಟೇ? ಎಂದರೆ ಮಾಡಿಲ್ಲ. ನನ್ನ ತಂದೆಯ ಮರಣಾನಂತರ ಆತನ ವಾರಸುದಾರರಾದ ನಾವು ಮಾತ್ರ ದಾವಾ ಸ್ವತ್ತುಗಳ ಮಾಲೀಕರು ಎಂದು ಕಂದಾಯ ದಾಖಲೆಗಳಲ್ಲಿ ನಮೂದಾಗಿದೆಯೇ? ಎಂದರೆ ಆಗಿಲ್ಲ. ಈ ದಿನಕ್ಕೆ ಕೂಡ ದಾವಾ ಸ್ವತ್ತಿನ ಕಂದಾಯ ದಾಖಲೆಗಳು ನನ್ನ ತಂದೆ ಹಾಗೂ ಜೆ.ಎಂ.ಕೃಷ್ಣಪ್ಪನವರ ಹೆಸರುಗಳಲ್ಲಿ ಜಂಟಿಯಾಗಿ ಖಾತೆ ನಮೂದಾಗಿದ್ದು, ನಾವು ಮತ್ತು ವಾದಿಗಳು ಜಂಟಿಯಾಗಿಯೇ ಸ್ವಾಧೀನ ಹೊಂದಿ ಅನುಭೋಗ ಮಾಡುತ್ತಾ ಬಂದಿದ್ದೇವೆ ಎಂದರೆ ಸರಿಯಲ್ಲ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು**).**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**